ಅ) ಹಾಗಿದ್ದಲ್ಲಿ ಹೊಸದಾಗಿ ಪ್ರಾರಂಭಿಸಲಾಗುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ ಅವುಗಳಿಗೆ ಎಂದು ಮಂಜೂರಾತಿ ನೀಡಲಾಗುವುದು?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಯಾವುದೂ ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಕೊಠಡಿಗಳ ನಿರ್ಮಾಣ

4621 - ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ 1997-98, 1998-99, 1999-2000ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ನಿರ್ಮಿಸಲಾದ ಕೊಠಡಿಗಳ ಸಂಖ್ಯೆ ಎಷ್ಟು?

ಆ) ಈ ಸಾಲುಗಳಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಲಿಕ್ಕೆ ಬಿಡುಗಡೆಯಾದ ಹಣ ಎಷ್ಟು? ಹಾಗೂ ಒಂದು ಕೊಠಡಿಗೆ ಖರ್ಚಾದ ಹಣ ಎಷ್ಟು?

ಇ) ಸರ್ಕಾರದಿಂದ ಮಂಜೂರಾದ ಹಣ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಮಾತ್ರ ಉಪಯೋಗಿಸಲಾಗಿದೆಯೇ ಅಥವಾ ಬೇರೆ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆಯೇ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬೆಳಗಾವಿ ಜಿಲ್ಲೆಯಲ್ಲಿ 1997-98, 1998-99 ಮತ್ತು 1999-2000ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ನಿರ್ಮಿಸಲಾದ ಕೊಠಡಿಗಳ ಸಂಖ್ಯೆ ಈ ಕೆಳಕಂಡಂತಿದೆ.

ಕ್ರ. ಸಂ.	ತಾಲ್ಲೂಕುಗಳ ಹೆಸರು	ಪ್ರಾಥಮಿಕ ಶಾಲೆಗಳು							ಪ್ರೌಢಶಾಲೆಗಳು		
		1997-98		1998-99		1999-2000			1997-98	1998-99	1999 2000
		ಸಾಮಾನ್ಯ	ನಗರ	ಸಾಮಾನ್ಯ	ನಗರ	ಸಾಮಾನ್ಯ	ನಗರ	ಒಬಿಬಿ			
1.	ಅಥಣಿ	32	-	11	-	-	4	42	-	-	-
2.	ಬೆಳಗಾಂ ನಗರ						2	-	-	-	-
3.	ಬೆಳಗಾಂ. ತಾ.	62	-	-	-	-	-	28	-	-	-
4.	ಬೈಲಹೊಂಗಲ	64	-	8	-	-	2	20	2	-	-
5.	ಚಿಕ್ಕೋಡಿ ನಗರ	-	-	-	-	-	2	-	1	-	-
6.	ಚಿಕ್ಕೋಡಿ ತಾ:	73	-	-	-	-	-	37	-	-	-
7.	ಗೋಕಾಕ	70	-	6	-	-	2	47	2	3	-
8.	ಹುಕ್ಕೇರಿ	25	-	10	-	-	-	24	2	-	-
9.	ಖಾನಾಪುರ	27	-	-	-	-	2	29	1	-	-
10.	ರಾಯಭಾಗ್	40	-	-	-	-	1	16	-	-	-
11.	ರಾಮದುರ್ಗ	24	-	-	-	-	1	9	-	-	1
12.	ಸವದತ್ತಿ	48	-	3	-	-	3	12	-	-	1
	ಒಟ್ಟು	**465**	**85**	**38**	**20**	**-**	**19**	**264**	**8**	**3**	**2**

ಆ) ಈ ಸಾಲುಗಳಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಿಸಲಿಕ್ಕೆ ಬಿಡುಗಡೆಯಾದ ಹಣದ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವರ್ಷ	ಪ್ರಾಥಮಿಕ ಶಾಲೆ			ಪ್ರೌಢಶಾಲೆ
	ಸಾಮಾನ್ಯ	ನಗರ	ಕಪ್ಪು ಹಲಗೆ	
1997-98	220.00	19.20	-	54.00
1998-99	97.10	18.00	-	54.00
1999-2000	56.55	18.00	480.16	54.00
ಒಟ್ಟು	**373.65**	**55.20**	**480.16**	**162.00**

ಒಂದು ಕೊಠಡಿ ನಿರ್ಮಾಣಕ್ಕೆ ಘಟಕ ವೆಚ್ಚ 1997-98 ರಲ್ಲಿ ರೂ. 75,000, 1998-99ರಲ್ಲಿ ರೂ. 90,000/- ಹಾಗೂ 1999-2000 ನೇ ಸಾಲಿಗೆ ರೂ. 1.10 ಲಕ್ಷಗಳಿಗೆ ಏರಿಸಲ್ಪಟ್ಟಿದೆ.

ಇ) ಸರ್ಕಾರದಿಂದ ಮಂಜೂರಾದ ಹಣ ಶಾಲಾ ಕೊಠಡಿ ನಿರ್ಮಾಣಕ್ಕೆ ಮಾತ್ರ ಉಪಯೋಗಿಸಲಾಗಿದೆ.

ಎಸ್.ಎಸ್.ಎಲ್.ಸಿ. ಬೋರ್ಡ್

4622 - ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ರಾಜ್ಯದ 4 ವಿಭಾಗಗಳಿಗೆ ಒಂದೊಂದು ಎಸ್.ಎಸ್.ಎಲ್.ಸಿ ಬೋರ್ಡ್ ಮಂಜೂರು ಮಾಡಿದೆಯೇ, ಅದು ಯಾವ ಯಾವ ಜಾಗದಲ್ಲಿ ಎಂದು ವಿವರಣೆ ನೀಡುವುದು?

ಆ) ಮಂಜೂರಾಗಿರುವ ಎಸ್.ಎಸ್.ಎಲ್.ಸಿ. ಬೋರ್ಡ್ ವಿಭಾಗದ ಕಛೇರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರದ ಆದೇಶ ಸಂಖ್ಯೆ : ಇಡಿ 57 ಎಸ್ಎಕ್ಸ್ಎಂ 95, ದಿನಾಂಕ 3-3-99ನ್ನು ದಿನಾಂಕ 29-02-2000ದ ಆದೇಶದೊಂದಿದೆ ಓದಿಕೊಂಡಂತೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯನ್ನು ಬೆಂಗಳೂರು, ಬೆಳಗಾಂ, ಗುಲ್ಬರ್ಗಾ ಮತ್ತು ಮೈಸೂರು ವಿಭಾಗೀಯ ಮಟ್ಟದಲ್ಲಿ ಕಾರ್ಯಾರಂಭ ಮಾಡಲು ಆದೇಶವನ್ನು ಹೊರಡಿಸಿದೆ. ವಿಭಾಗೀಯ ಮಟ್ಟದಲ್ಲಿ ಕಾರ್ಯಾಲಯಗಳನ್ನು ಪ್ರಾರಂಭಿಸಲು ಅವಶ್ಯಕವಾದ ಅಧಿಕಾರಿಗಳನ್ನು ನೇಮಿಸಿದೆ ಮತ್ತು ಸಿಬ್ಬಂದಿಯನ್ನು ಪೀಠೋಪಕರಣಗಳನ್ನು ಒದಗಿಸಲಾಗಿದೆ.

ಉಪನಿರ್ದೇಶಕರ ಹಾಗೂ ಬಿ.ಇ.ಓ ಕಛೇರಿ ಬಗ್ಗೆ

4623 - ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನಲ್ಲಿ ಉಪನಿರ್ದೇಶಕರ ಕಛೇರಿ (ಸಾರ್ವಜನಿಕ ಶಿಕ್ಷಣ ಇಲಾಖೆ) ಹಾಗೂ ಸದಲಗಾದಲ್ಲಿ ಬಿ.ಇ.ಓ. ಕಛೇರಿಯನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಕಛೇರಿಗಳನ್ನು ತೆರೆಯಲು ಸರಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು?